<u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

ಸಂಖ್ಯೆ : ಜಂಆ(ಕಂ) ಪಿ.ಆರ್/1979/ 2020-21

ಆಯುಕ್ತರ ಕಛೇರಿ,<br>ನಗರ ಪಾಲಿಕೆ ಕಛೇರಿಗಳು,<br>ಬೆಂಗಳೂರು, ದಿನಾಂಕ : 22-02-2021

## <u>ಸುತ್ತೋಲೆ</u>

ವಿಷಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರದ ಆಧಾರ ಉಪ ಮುನ್ಸಿಪಲ್ ಸಂಖ್ಯೆಗಳನ್ನು ನೀಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡು ಸ್ವಾಧೀನಾನುಭವ ಪತ್ರ ಪಡೆದ ಪ್ರಕರಣಗಳಲ್ಲಿ ಸ್ವಾಧೀನಾನುಭವ ಪತ್ರದ ಆಧಾರ ಎಲ್ಲಾ ಘಟಕಗಳಿಗೆ ಘಟಕವಾರು ಉಪ ಮುನ್ಸಿಪಲ್ ಸಂಖ್ಯೆಗಳನ್ನು ನೀಡಿ ಆಸ್ತಿತೆರಿಗೆ ವ್ಯಾಪ್ತಿಗೆ ಒಳಪಡಿಸುವುದು ಕಂದಾಯ ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ.

ಆದರೆ, ವಲಯ ಮಟ್ಟದಲ್ಲಿ ಕೇವಲ ಕ್ರಯಪತ್ರ ನೊಂದಾಯಿಸದವರಿಗೆ ಮಾತ್ರ ಖಾತೆ ವಿಭಜಿಸಿ ಉಪ ಮುನ್ಸಿಪಲ್ ಸಂಖ್ಯೆ ನೀಡುತ್ತಿರುವುದು ಕಂಡುಬಂದಿದೆ. ಈ ಕ್ರಮವು ಸಮಂಜಸವಾಗಿರುವುದಿಲ್ಲ. ಈ ಸಂಬಂಧ ತೆರಿಗೆದಾರರು / ಅನುಭವದಾರರಿಂದ ಹಲವಾರು ದೂರುಗಳನ್ನು ನೀಡುತ್ತಿದ್ದು, ವಲಯ ಮಟ್ಟದ ಅಧಿಕಾರಿಗಳಿಗೆ ಈಗಾಗಲೇ ಈ ಸಂಬಂಧ ಕ್ರಮ ಕೈಗೊಳ್ಳುವಂತೆ, ಸುತ್ತೋಲೆ ಆಂತರಿಕ ಕಛೇರಿ ಟಿಪ್ಪಣಿ ಮತ್ತು ಹಲವಾರು ಸಭೆಗಳಲ್ಲೂ ಸಹ ಸೂಚಿಸಲಾಗಿರುತ್ತದೆ. ಆದರೂ ಸಹ ಈ ಸಂಬಂಧ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ನಗರ ಪಾಲಿಕೆಗೆ ನ್ಯಾಯಾಯುತವಾಗಿ ಪಾವತಿಸಬೇಕಾಗಿರುವ ಆಸ್ತಿತೆರಿಗೆ ಸೋರಿಕೆ ಆಗುತ್ತಿರುತ್ತದೆ.

ಆದುದರಿಂದ ವಲಯ ಅಪರ / ಜಂಟಿ ಆಯುಕ್ತರುಗಳು ಇಂತಹ ಪ್ರಕರಣಗಳಲ್ಲಿ ಪೂರ್ಣ ಪ್ರಮಾಣದಲ್ಲಿ ವಸತಿ / ವಸತಿಯೇತರ ಘಟಕಗಳಿಗೆ ಉಪ ಮುನ್ಸಿಪಲ್ ಸಂಖ್ಯೆಗಳನ್ನು ನೀಡಿ ಅವುಗಳ ಉಪಯೋಗಕ್ಕೆ ಅನುಗುಣವಾಗಿ ಆಸ್ತಿತೆರಿಗೆ ನಿಗಧಿಪಡಿಸತಕ್ಕದ್ದು. ಮುಂದುವರೆದಂತೆ, ಈಗಾಗಲೇ ಭಾಗಶಃ ಘಟಕಗಳಿಗೆ ಉಪ ಮುನ್ಸಿಪಲ್ ಸಂಖ್ಯೆ ನೀಡಿರುವ ಪ್ರಕರಣಗಳಲ್ಲಿ ಉಳಿಕೆ ಎಲ್ಲಾ ಘಟಕಗಳಿಗೂ ಉಪ ಮುನ್ಸಿಪಲ್ ಸಂಖ್ಯೆ ನೀಡಿ ಆಸ್ತಿತೆರಿಗೆ ನಿಗಧಿಪಡಿಸತಕ್ಕದ್ದು. ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಸಮುಚ್ಚಯದಲ್ಲಿ "<u>ಖಾತಾ ಮೇಳ</u>"ವನ್ನು ಏರ್ಪಡಿಸಿ, ಸಮುಚ್ಚಯದ ಮಾಲೀಕರಿಂದ / ಸಂಘದ ಪದಾಧೀಕರಿಗಳಿಂದ ಮಾಲೀಕತ್ವದ ದಾಖಲೆಗಳನ್ನು ಪಡೆದು ಸಕಾಲದಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ಅನುವು ಮಾಡತಕ್ಕದ್ದು. ಈ ಸಂಬಂಧ ಕಾರ್ಯಯೋಜನೆಯನ್ನು ರೂಪಿಸಿಕೊಂಡು, ಪ್ರತಿಯನ್ನು ಜಂಟಿ ಆಯುಕ್ತರು (ಕಂದಾಯ) ರವರಿಗೆ ಆಗ್ಗಿಂದಾಗ್ಗೆ ಸಲ್ಲಿಸತಕ್ಕದ್ದು. (ನಮೂನೆ ಪ್ರತಿ ಲಗತ್ತಿಸಿದೆ). ಮುಂದುವರೆದಂತೆ, ಸದರಿ ಕಾರ್ಯದ ಪ್ರಗತಿಯ ಬಗ್ಗೆ 15 ದಿನಗಳಿಗೊಮ್ಮೆ ವಿಶೇಷ ಆಯುಕ್ತರು (ಕಂದಾಯ) ರವರು ಸಭೆಯನ್ನು ನಡೆಸಿ, ವರದಿಯನ್ನು ಮಂಡಿಸತಕ್ಕದ್ದು.

ಒಂದು ವೇಳೆ ಇನ್ನು ಮುಂದೆ ಭಾಗಶಃ ಘಟಕಗಳಿಗೆ ಆಸ್ತಿತೆರಿಗೆ ನಿಗಧಿಪಡಿಸಿರುವುದು ಕಂಡುಬಂದಲ್ಲಿ ಅಂತಹ ಅಧಿಕಾರಿ / ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ಆಯುಕ್ತರು<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :
ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಲಾಗಿದೆ.
ಎಲ್ಲಾ ವಲಯ ಆಯುಕ್ತರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಲಾಗಿದೆ.
ವಿಶೇಷ ಆಯುಕ್ತರು (ಕಂದಾಯ) ರವರ ಮಾಹಿತಿಗಾಗಿ ಕಳುಹಿಸಿದೆ
ಎಲ್ಲಾ ವಲಯ ಅಪರ / ಜಂಟಿ / ಉಪ ಆಯುಕ್ತರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.